4. ವಿಧವಾ ವೇತನ ಪಡೆಯುವವರು ಸರ್ಕಾರದ ವಿಧವಾ ವೇತನ ಪ್ರಮಾಣ ಪತ್ರವನ್ನು ಹೊಂದಿರಬೇಕು.
5. ವಿಕಲಚೇತನರು ವೈದ್ಯಕೀಯ ಪ್ರಮಾಣ ಪತ್ರವನ್ನು ಹೊಂದಿರಬೇಕು.
6. ಸಫಾಯಿ ಕರ್ಮಚಾರಿಗಳು ಬಿಬಿಎಂಪಿ ಗುರುತಿನ ಚೀಟಿಯನ್ನು ಹೊಂದಿರಬೇಕು.
7. ಕಾಳಜಿ ಪ್ರದೇಶದ ನಿವಾಸಿಗಳ ಹಕ್ಕು ಪತ್ರವನ್ನು ಮತದಾರ ಗುರುತಿಸಿ ಚೀಟಿಯನ್ನು ಹೊಂದಿರಬೇಕು.

ಇ) ಸಂಧರ್ಭಕ್ಕನುಸಾರವಾಗಿ ಕಠಿಣ ನಿಯಮಗಳನ್ನು ಸಡಿಲಿಸಿ ಸೌಲಭ್ಯಗಳನ್ನು ಒದಗಿಸಲಾಗುತ್ತದೆ.

ಈ) ಬಡವರಿಗೆ ಸುಲಭ ಸಾಧ್ಯ ನಿಯಮಗಳನ್ನು ರಚಿಸಿ ಅನುಕೂಲ ಮಾಡಿಕೊಡಲಾಗಿದೆ.

ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿರುವ ಕಸ ವಿಲೇವಾರಿ
(222): 362

ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ)

ಅ) ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿರುವ ಹೋಟೆಲ್‌ಗಳು, ಮಾಲ್‌ಗಳು, ಆಸ್ಪತ್ರೆಗಳು ಸೇರಿದಂತೆ ದೊಡ್ಡ ಪ್ರಮಾಣದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ವಿಲೇವಾರಿಗಾಗಿ ಮಹಾನಗರ ಸಭೆಯವರು ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)

ಆ) ಈ ತ್ಯಾಜ್ಯ ಮೂಲಗಳಿಗೆ ವಿಧಿಸಲಾಗಿರುವ ಕಾನೂನು ನಿಯಮಗಳನ್ನು ಪಾಲಿಸಲಾಗುತ್ತಿದೆಯೇ?ಉಲ್ಲಂಘನೆಯಾದ ಪ್ರಕರಣಗಳನ್ನು ಗುರುತಿಸಿ ಜರುಗಿಸಿದ ಕ್ರಮ-ಗಳೇನು?

ಇ) ಮನೆಗಳಲ್ಲಿನ ತ್ಯಾಜ್ಯ ವಿಂಗಡಣೆಗೆ ಸಾರ್ವಜನಿಕರಲ್ಲಿ ಅರಿವು ನೀಡುವ ಕುರಿತು ಕೈಗೊಂಡ ಕ್ರಮಗಳೇನು?

ಈ) ಕಸ ವಿಲೇವಾರಿಗಾಗಿ ಗುರುತಿಸಿದ ಸ್ಥಳಗಳು ಮತ್ತು ಕೈಗೊಂಡ ವೈಜ್ಞಾನಿಕ ಕ್ರಮಗಳೇನು?

ಶ್ರೀ ಜಗದೀಶ್ ಶೆಟ್ಟರ್ ಮುಖ್ಯಮಂತ್ರಿಯವರು

ಅ) ಪಾಲಿಕೆಯಲ್ಲಿ ಬರುವ ಎಲ್ಲ ದೊಡ್ಡ ಪ್ರಮಾಣದ ಕಸ ಉತ್ಪತ್ತಿದಾರರನ್ನು ಪಾಲಿಕೆಯು ಗುರುತಿಸಿರುತ್ತದೆ. ಇವರುಗಳು ತ್ಯಾಜ್ಯವನ್ನು ಮೂಲದಲ್ಲಿ ಬೇರ್ಪಡಿಸುವುದು ಹಾಗೂ ಈ ತ್ಯಾಜ್ಯಗಳನ್ನು ಅವರುಗಳೇ ವಿಲೇವಾರಿ ಮಾಡಲು ಈಗಾಗಲೇ ಸಾರ್ವಜನಿಕ ಪ್ರಕಟಣೆ ಮೂಲಕ ಸಾರ್ವಜನಿಕರಿಗೆ ತಿಳುವಳಿಕೆ ನೀಡಲಾಗಿರುತ್ತದೆ. ಅದರಂತೆ ದೊಡ್ಡ ಪ್ರಮಾಣದ ಘನ ತ್ಯಾಜ್ಯ ಉತ್ಪತ್ತಿದಾರರು ತ್ಯಾಜ್ಯವಸ್ತುಗಳನ್ನು ಅವರೇ ವಿಲೇವಾರಿ ಮಾಡುವುದು ಅವರ ಆದ್ಯ ಕರ್ತವ್ಯವಾಗಿರುತ್ತದೆ. ಮುಂದುವರೆದಂತೆ ಆಸ್ಪತ್ರೆಯಲ್ಲಿ (Bio Medical Waste) ಉತ್ಪತ್ತಿಯಗುವ ತ್ಯಾಜ್ಯವನ್ನು ಸಂಸ್ಕರಿಸಲು ಹಾಗೂ ವಿಲೇವಾರಿ ಮಾಡಲು ಈಗಾಗಲೇ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಮೆ॥ ರಾಮ್ಕಿ ಮತ್ತು ಮೆ॥ ಮರಡಿ ಸಂಸ್ಥೆಗಳಿಗೆ ಒಡಂಬಡಿಕೆ ಮುಖಾಂತರ ವಹಿಸಿಕೊಡಲಾಗಿದೆ.

ಆ) ಈ ಬಗ್ಗೆ ಈಗಾಗಲೇ ಪತ್ರಿಕಾ ಪ್ರಕಟಣೆ ಹೊರಡಿಸಿದ್ದು ತ್ಯಾಜ್ಯವನ್ನು ಮೂಲದಲ್ಲಿ ಬೇರ್ಪಡಿಸುವುದು ತ್ಯಾಜ್ಯ ಉತ್ಪತ್ತಿದಾರರ ಕರ್ತವ್ಯವಾಗಿರುತ್ತದೆಂದು ತಿಳಿಸಲಾಗಿದೆ. ಈ ಬಗ್ಗೆ ಉಲ್ಲಂಘನೆಯಾದ ಪ್ರಕರಣದಲ್ಲಿ ದಂಡ ವಿಧಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ಅದರಂತೆ ಉಲ್ಲಂಘನೆ ಪ್ರಕರಣಗಳನ್ನು ಗುರುತಿಸಿ ದಂಡ ವಿಧಿಸಲಾಗುವುದು.

ಇ) ಮೂಲದಲ್ಲೇ ಕಸ ವಿಂಗಡಿಸುವ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು, ದಿನ ಪತ್ರಿಕೆ, ಮಿಡಿಯಾದಲ್ಲಿ ಜಾಹೀರಾತು ನೀಡುವುದು ಹಾಗೂ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಚರ್ಚಾಕೂಟ ಸ್ಪರ್ಧೆ, ಪಾಠಶಾಲೆಗಳಲ್ಲಿ ಸಭೆಗಳನ್ನು ನಡೆಸುವುದು ಮುಂತಾದ ಕಾರ್ಯಕ್ರಮಗಳ ಮುಂಖಾಂತರ ತಿಳುವಳಿಕೆ ನೀಡಲಾಗುತ್ತಿದೆ. ಇತ್ತೀಚೆಗೆ ಸ್ವತಂತ್ರ ಉದ್ಯಾನವನದಲ್ಲಿ ಕಸದ ಹಬ್ಬವನ್ನು ದಿನಾಂಕ: 03.02.2013 ರಿಂದ 10.02.2013 ರವರೆಗೆ ಆಚರಿಸಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಅರಿವು ಮೂಡಿಸಲು ಕ್ರಮ ಕೈಗೊಳ್ಳಲಾಗಿದೆ.

ಈ) ಬೆಂಗಳೂರು ನಗರದ ಘನತ್ಯಾಜ್ಯ ಸಂಸ್ಕರಣೆ ಹಾಗೂ ವಿಲೇವಾರಿಗಾಗಿ ಪಾಲಿಕೆಯು ಈ ಕೆಳಕಂಡ ಸ್ಥಳಗಳಲ್ಲಿ ಸಲಸ್ಕರಣಾ / ವಿಲೇವಾರಿ ಘಟಕಗಳನ್ನು ಸ್ಥಾಪಿಸಲಾಗಿರುತ್ತದೆ.

1. ಮಾವಳ್ಳಿಪುರ ಘನತ್ಯಾಜ್ಯ ಸಂಸ್ಕರಣಾ / ವಿಲೇವಾರಿ ಘಟಕ.

2. ಮಂಡೂರು (ದಕ್ಷಿಣ) ಘನತ್ಯಾಜ್ಯ ಸಂಸ್ಕರಣಾ / ವಿಲೇವಾರಿ ಘಟಕ.
3. ಮಂಡೂರು (ಉತ್ತರ) ಘನತ್ಯಾಜ್ಯ ಸಂಸ್ಕರಣಾ / ವಿಲೇವಾರಿ ಘಟಕ.
4. ದೊಡ್ಡಬಳ್ಳಾಪುರ ತಾಲ್ಲೂಕು ಗುಂಡ್ಲಹಳ್ಳಿ ಘನತ್ಯಾಜ್ಯ ಸಂಸ್ಕರಣಾ / ವಿಲೇವಾರಿ ಘಟಕ.
5. ಸುಬ್ಬರಾಯನಪಾಳ್ಯ ಸಂಸ್ಕರಣಾ / ವಿಲೇವಾರಿ ಘಟಕ.
6. ಎಸ್.ಬಿಂಗಿಪುರ ವಿಲೇವಾರಿ ಘಟಕ.

Recycle ಆದ ನೀರಿನ ಬಳಕೆ
(257): 369

ಶ್ರೀ ರವಿ ಸುಬ್ರಮಣ್ಯ ಎಲ್.ಎ [ಬಸವನಗುಡಿ]

ಅ) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಬೆಂಗಳೂರು ನಗರದಲ್ಲಿ Recycle ಆದ ನೀರನ್ನು ಯಾವ ಯಾವ ಉದ್ದೇಶಗಳಿಗೆ ಬಳಸಲಾಗುತ್ತಿದೆ? ಈ ನೀರಿನ ಪ್ರಮಾಣವೆಷ್ಟು?

ಆ) ಮಂಡಳಿ ವತಿಯಿಂದ ವಿವಿಧ ಕಾಮಗಾರಿಗಳಿಗೆ ಗುಂಡಿಗಳನ್ನು ಅಗೆಯುತ್ತಿರುವುದರಿಂದ ಧೂಳಿನ ಪ್ರಮಾಣ ಹೆಚ್ಚಾಗಿ Asthama, Bronchitis, Dust Allergy ಪ್ರಕರಣಗಳು ಹೆಚ್ಚಾಗುತ್ತಿದ್ದು, ಇದನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?

ಎಸ್.ಸುರೇಶ್ ಕುಮಾರ್
ನಗರಾಭಿವೃದ್ಧಿ, ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು.

ಅ) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ recycle ನೀರನ್ನು ಕುಡಿಯಲು ಹೊರತುಪಡಿಸಿ ಇತರೆ ಬಳಕೆಗಳಿಗೆ ಅಂದರೆ ಉದ್ಯಾನವನಗಳ ನೀರಾವರಿಗಾಗಿ, ಕಟ್ಟಡಗಳ ನಿರ್ಮಾಣಕ್ಕಾಗಿ, ವಾಹನಗಳನ್ನು ಸ್ವಚ್ಚಗೊಳಿಸಲು ಹಾಗೂ ಇತರೆ ಉದ್ದೇಶಗಳಿಗಾಗಿ ಉಪ-ಯೋಗಿಸಲಾಗುತ್ತಿದೆ.